ಜಿಗಿದು ಬಂತು. ಜಿಗಿದು ಹೊರಬಂದ್ದಷ್ಟೆ ಕಾಗೆ ಮರಿಗೆ ಮೂರ್ಛೆ ಬಂದಂತಾಯಿತು. ಅದರ ಬಣ್ಣ, ಕಣ್ಣು, ನಡಿಗೆ, ಚೂಪಿನ ಚುಂಚು ನೋಡಿದ್ದೇ– ಓ ನಮ್ಮ ಕಾಡಿನಲ್ಲಿ ಇದೆಂತಹ ಪಕ್ಷಿ ಬಂದಿದೆ ಎಂದು ಹದ್ದಿನ ಮರಿ ಮೈಬಣ್ಣಕ್ಕೆ ಮರುಳಾಯಿತು. ಒಮ್ಮೆ ತನ್ನ ಮೈಯನ್ನು ಮತ್ತೊಮ್ಮೆ ಹದ್ದಿನ ಮರಿಯ ಮೈಯನ್ನು ಮುಟ್ಟಿ ನೋಡಿತು. ಕಾಗೆ ಮರಿ ಓಡಿ ಮನೆಯಲ್ಲಿ ಕಾಗೆ ಅಮ್ಮ ಇಟ್ಟಿದ್ದ ಕಾಳುಗಳನ್ನು ತಂದು ತಿನ್ನಲು ಹದ್ದಿನ ಮರಿ ಚುಮುಗೆ ಕೊಟ್ಟಿತು. ಸಣ್ಣಹುಳು– ಹುಪ್ಪಡಿ, ಸಣ್ಣ ಮಾಂಸದ ಚೂರುಗಳನ್ನೇ ತಿಂದು ಅಭ್ಯಾಸವಾಗಿದ್ದ, ಹದ್ದಿನ ಮರಿಗೆ ಕಾಳನ್ನು ಬಾಯಲ್ಲಿಟ್ಟದ್ದೇ ಗಟ್ಟಿ ಅನಿಸಿತು, ಸಪ್ಪೆಯೂ ಅನಿಸಿತು. ಅದರೂ 'ಮೊದಲ ಗೆಳತಿ ಕೊಟ್ಟದ್ದು, ಮೊದಲು ಅರಳಿದ ಹೂವು, ಮೊದಲು ಮಳೆ ಹನಿ ನೀರು ಎಲ್ಲವೂ ಶುಭದಾಯಕ' ಎಂದು ಅಮ್ಮ ಹೇಳಿದ್ದು ನೆನಪಾಯಿತು. ಕಟಮ್ ಎಂದು ಕಡಿಯಲು ಹೋಯಿತು. ಆಗಲಿಲ್ಲ. ಕಾಳನ್ನು ಪುಕ್ಕದಲ್ಲಿ ಬಚ್ಚಿಟ್ಟುಕೊಂಡಿತು. 'ಬೇಜಾರು ಮಾಡಿಕೊಳ್ಳಬೇಡಾ ಕಾಜೂ, ಆಮೇಲೆ ತಿನ್ನುವೆ' ಎಂದಿತು.

ನಂತರ ಬಾ ನಮ್ಮ ಮನೆಗೆ ಎಂದು ಗೂಡೊಳಗೆ ಕರೆಯಿತು. ಕಾಗೆ ಮರಿಯೂ ಗೂಡೊಳಗೆ ನುಸುಳಿತು. ಓ.. ಅದು ಅರಮನೆಯಂತಿದೆ. ತಮ್ಮ ಗೂಡಿನಂತೆ ಸಣ್ಣ ಕಡ್ಡಿಪುರಿಯಂಥ ಕಡ್ಡಿಗಳು ತಪ್ಪಲುಗಳಿಂದ ಕಟ್ಟಿದ ಮನೆಯಲ್ಲವದು. ಅರಮನೆ. ಹತ್ತಿ, ಉಣ್ಣೆ ರೇಷ್ಮೆಯ ಎಳೆಯಿಂದ ಮಾಡಿದ ಮೆತ್ತನೆಯ ಗೂಡಿನ ಹಾಸಿಗೆ. ಜಿಗಿದಾಡಿತು, ಕಾಲಿಗೆ ಹತ್ತಿದ ಕೆಸರು ಅಲ್ಲಿಯ ಮೆತ್ತನೆಯ ಹಾಸಿಗೆಗೆ ಹತ್ತಿತ್ತು.

ಆಗಲೇ ಅಲ್ಲಿಗೇ ಬಂದ ತಾಯಿ ಹದ್ದು, ಕಾಗೆ ಮರಿ ಕಾಜುವನ್ನು ನೋಡಿತು. ಕೆಂಡದಂತಹ ಸಿಟ್ಟು ಬಂತು. 'ಯೋಗ್ಯತೆಯಿಲ್ಲದ ಹೊಲಸು ಕಾಗೆ ಮರಿಯೇ, ಹೊಲಸು ಮಾಡಿಯೇ ಬಿಟ್ಟೆಯಾ. ನೀನೋ ಕಪ್ಪು. ನಿನ್ನ ಗುಣವೂ ಕಪ್ಪು. ನಿನ್ನಂಥ ಕರಿಯನ ಗೆಳತನ ಮಾಡಿದರೆ ನಮ್ಮ ಮರ್ಯಾದೆ ಏನಾಗಬೇಡಾ..! ನಡಿ ಆಚೆ...!' ಎಂದು ಗೂಡಿಂದ ದಬ್ಬಿತು, ಬಿದ್ದ ರಭಸಕ್ಕೆ ಕಾಗೆ ಮರಿಗೆ ಕಾಲು ಉಳುಕಿ ಏಳಲೂ ಆಗಲಿಲ್ಲ. ಗಿಡದ ಕೆಳಗೆ ಬಿದ್ದು ನರಳತೊಡಗಿತು. ಮರಿ ಕಾಗೆ ಬಿದ್ದುದನ್ನು ದೂರದಿಂದ ಕಂಡ

